ಕುಟ್ಟುತ್ತಾ ಇಲ್ಲ.

ಉಪಾಧ್ಯಕ್ಷಿಣಿಯವರು :– ಅವರು ಮೊದಲೇ ಚಪ್ಪಾಳೆ ತಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ಮತ್ತೊಂದು ಪ್ರಶ್ನೆ, ಮುಂದಿನ ಸಚಿವ ಸಂಪುಟವನ್ನು ಯಾವತ್ತು ರಚನೆ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಏಕೆಂದರೆ, ಎಲ್ಲಾ ಇಲಾಖೆಗಳನ್ನೂ ಮುಖ್ಯಮಂತ್ರಿಗಳೊಬ್ಬರೇ ಇಟ್ಟುಕೊಂಡಿದ್ದಾರೆ. ಬದಲಾವಣೆ ಮಾಡುತ್ತೇನೆಂದು ಅನೇಕ ಸಾರಿ ಹೇಳಿದ್ದಾರೆ. ಆದ್ದರಿಂದ ಯಾವಾಗ ಸಂಪುಟ ವಿಸ್ತರಣೆ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು.

ಉಪಾಧ್ಯಕ್ಷಿಣಿಯವರು :– ಸಂಪುಟವನ್ನು ಯಾವಾಗ ವಿಸ್ತರಣೆ ಮಾಡಿದರೂ ಕೂಡ, ನಿಮಗಂತೂ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ನನಗೆ ಅವರು ಕೊಟ್ಟರೂ ಬೇಡ. ಮುಖ್ಯಮಂತ್ರಿಯವರ ಬಗ್ಗೆ ಬಹಳ ಗೌರವ ಇದೆ. ದಯಮಾಡಿ ಮುಂದಿನ ಮಂತ್ರಿಮಂಡಲವನ್ನು ಯಾವಾಗ ರಚನೆ ಮಾಡುತ್ತೀರಿ ಎನ್ನುವುದನ್ನು ಈ ರಾಜ್ಯಕ್ಕೆ ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ನಿಮ್ಮಂಥ ಹಿರಿಯರ ಜೊತೆಯಲ್ಲಿ ಮಾತನಾಡಿ ಮಾಡೋಣ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

I. ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):
ಮಾನ್ಯ ಉಪಾಧ್ಯಕ್ಷಿಣಿಯವರೆ, ಭಾರತ ಸಂವಿಧಾನದ ಅನುಚ್ಛೇದ 213 (2) (ಎ) ನೇ ಕಲಮಿನ ಮೇರೆಗೆ

1. 1992ನೇ ಇಸವಿಯ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಆಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 09–11–1992ರಂದು ಹೊರಡಿಸಲಾದ ಎಲ್ಎಡಬ್ಲ್ಯು:64: ಎಲ್ಜಿಎನ್: 92ನೇ ಕ್ರಮಾಂಕದ ಅಧಿಸೂಚನೆ.

2. 1992ನೇ ಇಸವಿಯ ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆಗೆ (ತಿದ್ದುಪಡಿ) (ಸಂ.2) ಆಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 20–08–1992ರಂದು ಹೊರಡಿಸಲಾದ ಎಲ್ಎಡಬ್ಲ್ಯು:59:ಎಲ್ಜಿಎನ್ : 92ನೇ ಕ್ರಮಾಂಕದ ಅಧಿಸೂಚನೆ.

3. 1992ನೇ ಇಸವಿಯ ಕರ್ನಾಟಕ ಸರಕು ಪ್ರವೇಶಗಳ ತೆರಿಗೆ (2ನೇ ತಿದ್ದುಪಡಿ) ಆಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 30–09–1992ರಂದು ಹೊರಡಿಸಲಾದ ಎಲ್ಎಡಬ್ಲ್ಯು : 66: ಎಲ್ಜಿಎನ್: 92ನೇ ಕ್ರಮಾಂಕದ ಅಧಿಸೂಚನೆ.

4. 1992ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ಆಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 24–07–1992ರಂದು ಹೊರಡಿಸಿದ ಎಲ್ಎಡಬ್ಲ್ಯು: 40: ಎಲ್ಜಿಎನ್; 92ನೇ ಕ್ರಮಾಂಕದ ಅಧಿಸೂಚನೆ.

1979ನೇ ಇಸವಿಯ ಸರಕು ಸಾಗಣೆಯ ಮೇಲಿನ ಕರ್ನಾಟಕ ತೆರಿಗೆ ಅಧಿನಿಯಮ (1979ನೇ ಇಸವಿಯ ಕರ್ನಾಟಕ ಅಧಿನಿಯಮ 27)ದ 3ನೇ ಕಲಮಿನ ಮೇರೆಗೆ :

5. ಬಳಕೆ ಮತ್ತು ಮಾರಾಟಕ್ಕಾಗಿ ಪ್ರತಿಯೊಂದು ಸ್ಥಳೀಯ ಪ್ರದೇಶದೊಳಗಡೆ ಬರುವ ಸರಕು ಸಾಗಾಣಿಕೆಯ ಮೇಲಿನ ಕರ್ನಾಟಕ ತೆರಿಗೆಗೆ ಸಂಬಂಧಿಸಿದಂತೆ ದಿನಾಂಕ : 30–04–1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್ಡಿ : 69 : ಸಿಇಟಿ : 92

1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮದ ಕಲಮು 71 (2) (4)ರ ಮೇರೆಗೆ:

6. 1969ನೇ ಇಸವಿಯ ಕರ್ನಾಟಕ ಅಬಕಾರಿ (ಮದ್ಯಗಳ ಚಿಲ್ಲರೆ ಮಾರಾಟದ ಹಕ್ಕಿನ ಗೇಣಿ) ನಿಯಮಾವಳಿಗಳ 16ಎ 2(ii) ಮತ್ತು 17 (ಬಿ) 1 (ಬಿ) ನಿಯಮದ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ: 30–06–1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಡಿ : 27 : ಪಿಇಎಸ್ :92

7. 1992ನೇ ಇಸವಿಯ ಡಿಸ್ಟಿಲರಿ ಮತ್ತು ಬ್ರಿವರಿ ಪರವಾನಗಿ ಶುಲ್ಕ (ತಿದ್ದುಪಡಿ)ದ ಹೆಚ್ಚಳಕ್ಕೆ ಸಂಬಂಧಿಸಿದಂತೆ ದಿನಾಂಕ : 17–07–1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ : ಎಫ್‌ಡಿ : 14 : ಪಿಇಎಸ್ : 92

8. 1992–93ರ ಆಯವ್ಯಯ ಭಾಷಣ – 1987ನೇ ಇಸವಿಯ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ಉಗ್ರಾಣ) ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ: 11–06–1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಡಿ : 3 : ಪಿಇಎಸ್ : 92

1956ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಹಾಗೂ ಭತ್ಯೆಗಳ ಅಧಿನಿಯಮದ 12(2 ಎ) (ಬ)ನೇ ಕಲಮಿನ ಮೇರೆಗೆ:

9. ಶ್ರೀ ಎನ್. ಚಿಕ್ಕೇಗೌಡ, ಕೃಷಿ ಮಂತ್ರಿಯವರ ಲಂಡನ್ ಭೇಟಿಯ ಸಂಬಂಧದಲ್ಲಿ ದಿನಾಂಕ : 19–08–1992 ರಂದು ಹೊರಡಿಸಲಾದ ಡಿಪಿಎಆರ್ : 50 : ಜಿಎಎಂ : 92ರ ಕ್ರಮಾಂಕದ ಆದೇಶ.

10. ಮುಖ್ಯಮಂತ್ರಿಯವರ ವಿದೇಶ ಪ್ರವಾಸದ ಸಂಬಂಧದಲ್ಲಿ ದಿನಾಂಕ : 14–07–1992ರಂದು ಹೊರಡಿಸಲಾದ ಡಿಪಿಎಆರ್ : 39 :ಜಿಎಎಂ : 92ನೇ ಕ್ರಮಾಂಕದ ಆದೇಶ.

1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ:

11. ಒಇ : 83 :ಸಿಎನ್‌ಎ: 89 ದಿನಾಂಕ : 23–7–1992

ಇಂಡಿಯನ್ ಪೊಟಾಷ್ ಲಿಮಿಟೆಡ್‌ರವರು ರೈತರಿಗೆ ಉಪಯುಕ್ತವಾದ ವ್ಯವಸಾಯಕ್ಕೆ ಸಂಬಂಧಿಸಿದ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ.

12. ಒಇ : 152 : ಸಿಎನ್‌ಎ : 92 ದಿನಾಂಕ : 11–08–1992

ಸಂಚಾರ ಚಲನಚಿತ್ರ ಮಂದಿರಗಳನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಅವಧಿ ವಿಸ್ತರಣೆ ಬಗ್ಗೆ.

13. ಒಇ : 159 : ಸಿಎನ್‌ಎ : 92 ದಿನಾಂಕ : 24–07–1992

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿರುವ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಕಾರ್ಮಿಕರಿಗೆ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ.

14. ಒಇ :128: ಸಿಎನ್‌ಎ : 92 ದಿನಾಂಕ : 01–08–1992

ಧಾರವಾಡ ಜಿಲ್ಲೆ ಹಿರೇಕೆರೂರಿನ ದುರ್ಗ ಚಿತ್ರಮಂದಿರದ ನಿರಾಕ್ಷೇಪಣ ಪತ್ರವನ್ನು ವಿಸ್ತರಿಸುವ ಬಗ್ಗೆ.

15. ಒಇ : 136 : ಸಿಎನ್‌ಎ : 92 ದಿನಾಂಕ : 27–08–1992

ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ಕೋಟಾಲದಿನ್ನೆಯ ಗ್ರಾಮದ ಸರ್ವೆ ನಂ.79 : 2ರಲ್ಲಿರುವ ಶ್ರೀ ಎಸ್.ಎಲ್.ಎನ್. ಸಂಚಾರಿ ಚಿತ್ರಮಂದಿರವನ್ನು ಆರೆ ಖಾಯಂ ಆಗಿ ಪರಿವರ್ತಿಸುವ ಬಗ್ಗೆ.

16. ಒಇ: 194 : ಸಿಎನ್ಎ : 92 ದಿನಾಂಕ : 21–08–1992

ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದಲ್ಲಿರುವ ಶ್ರೀ ವಿಜಯಲಕ್ಷ್ಮಿ ಸಂಚಾರಿ ಚಿತ್ರಮಂದಿರವನ್ನು ಆರೆ ಖಾಯಂ ಆಗಿ ಪರಿವರ್ತಿಸುವ ಬಗ್ಗೆ.

17. ಒಇ : 183 : ಸಿಎನ್ಎ : 92 ದಿನಾಂಕ : 21–08–1992

ದಕ್ಷಿಣ ಕನ್ನಡ ಜಿಲ್ಲೆ, ಕಾರ್ಕಳ ತಾಲ್ಲೂಕು ಹೆಬ್ರಿಯ ಶ್ರೀ ರಾಘವೇಂದ್ರ ಸಂಚಾರಿ ಚಿತ್ರಮಂದಿರವನ್ನು ಆರೆ ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.

18. ಒಇ : 176 : ಸಿಎನ್ಎ : 92 ದಿನಾಂಕ : 04–09–1992

ಧಾರವಾಡ ಜಿಲ್ಲೆ ರೋಣ ಶ್ರೀ ರೇಣುಕಾ ಆರೆ ಖಾಯಂ ಚಿತ್ರಮಂದಿರದ ನಿರಾಕ್ಷೇಪಣಾ ಪತ್ರವನ್ನು ವಿಸ್ತರಿಸುವ ಬಗ್ಗೆ.

19. ಒಇ : 166 : ಸಿಎನ್ಎ : 92 ದಿನಾಂಕ : 07–09–1992

ಬೆಂಗಳೂರು ಜಿಲ್ಲೆ ಕನಕಪುರ ತಾಲ್ಲೂಕು ಚಿಕ್ಕಮುದುವಾಡಿಯಲ್ಲಿ ಕಟ್ಟುತ್ತಿರುವ ಮಿನಿ ಚಿತ್ರಮಂದಿರದ ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ.

20. ಒಇ : 211 : ಸಿಎನ್ಎ : 92 ದಿನಾಂಕ : 23–10–1992

ಬಳಾಂಪುರ ಉದ್ದಿಮೆ ಲಿಮಿಟೆಡ್, ಬಿಣಗಾ ತಾಲ್ಲೂಕು ಕಾರವಾರ, ಉತ್ತರ ಕನ್ನಡ ಜಿಲ್ಲೆ ಇವರ ಸಭಾಗೃಹದಲ್ಲಿ 35 ಎಂ.ಎಂ. ಚಿತ್ರಪ್ರದರ್ಶನದ ಬಗ್ಗೆ ಅನುಮತಿ ಕುರಿತು.

21. ಒಇ : 168 : ಸಿಎನ್ಎ : 92 ದಿನಾಂಕ : 23–10–1992

ಮನೋರಂಜನಾ ಕಾರ್ಮಿಕ ಕಲ್ಯಾಣ ಆಡಳಿತಾಧಿಕಾರಿ ಕಾರಿಗನೂರು ಇವರಿಗೆ 16 ಎಂ.ಎಂ. ಚಿತ್ರಪ್ರದರ್ಶನಗಳನ್ನು ಪ್ರದರ್ಶಿಸಲು ಪರವಾನಿಗೆ ಬಗ್ಗೆ ಅಧಿಸೂಚನೆ.

1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ:

22. 1988–89 ಮತ್ತು 1989–90 ನೇ ಸಾಲುಗಳ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 11 ಮತ್ತು 12ನೇ ವಾರ್ಷಿಕ ವರದಿಗಳನ್ನು (ವರದಿಯನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ)

23. 1987–88 ನೇ ಸಾಲಿನ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 18ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು;

24. 1987–88ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 3ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು;

25. 1989–90ನೇ ಸಾಲಿನ ಮೈಸೂರು ಮ್ಯಾಚ್ ಕಂಪನಿ ನಿಯಮಿತದ 50ನೇ ವಾರ್ಷಿಕ ವರದಿ (ವರದಿಯನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ);

26. 31–03–1991ಕ್ಕೆ ಕೊನೆಗೊಳ್ಳುವ ಬೆಂಗಳೂರು ಪ್ರಾಣಿ ಆಹಾರ ನಿಗಮ ನಿಯಮಿತದ 17ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು;

1973ನೇ ಇಸವಿಯ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಅಧಿನಿಯಮ 26ನೇ ಕಲಮಿನ ಮೇರೆಗೆ;

27. 1991–92ನೇ ಸಾಲಿನ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನ ಅಭಿವೃದ್ಧಿ ಮಂಡಳಿಯ ವಾರ್ಷಿಕ ವರದಿ.

1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ:

28. 1989–90ನೇ ಸಾಲಿನ ಮೈಸೂರು ಕಾಸ್ಟ್‌ಟಿಕ್ಸ್ ನಿಯಮಿತದ 24ನೇ ವಾರ್ಷಿಕ ವರದಿ (ವರದಿಯನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ)

29. 1987–88 ಮತ್ತು 1988–89ನೇ ಸಾಲುಗಳ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತದ 48ನೇ ಮತ್ತು 49ನೇ ವಾರ್ಷಿಕ ವರದಿ;

30. 1990–91ನೇ ಸಾಲಿನ ಮೈಸೂರು ಷುಗರ್ ಕಂಪೆನಿ ನಿಯಮಿತದ 57ನೇ ವಾರ್ಷಿಕ ವರದಿ;

31. 1990–91ನೇ ಸಾಲಿನ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 16ನೇ ವಾರ್ಷಿಕ ವರದಿ (ವರದಿಯನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ)

32. 1990–91ನೇ ಸಾಲಿನ ಮೈಸೂರು ಮಿನರಲ್ಸ್ ನಿಯಮಿತದ 25ನೇ ವಾರ್ಷಿಕ ವರದಿ;

33. 1991–92ನೇ ಸಾಲಿನ ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತದ 56ನೇ ವಾರ್ಷಿಕ ವರದಿ;

34. 1990–91ನೇ ಸಾಲಿನ ಎನ್.ಜಿ.ಇ.ಎಫ್. ನಿಯಮಿತದ 26ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು;

35. 1990–91ನೇ ಸಾಲಿನ ಮಾರ್ಕೆಟಿಂಗ್ ಕನ್‌ಸಲ್ಟೆಂಟ್ಸ್ ಮತ್ತು ಏಜೆನ್ಸೀಸ್ ನಿಯಮಿತದ 19ನೇ ವಾರ್ಷಿಕ ವರದಿ;

36. 1989–90ನೇ ಸಾಲಿನ ಮೈಸೂರು ಪೈಂಟ್ಸ್ ಮತ್ತು ವಾರ್ನಿಷ್ ನಿಯಮಿತದ 44ನೇ ವಾರ್ಷಿಕ ವರದಿ;

37. 1989–90 ಮತ್ತು 1990–91ನೇ ಸಾಲುಗಳ ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್ ನಿಯಮಿತದ 30ನೇ ಮತ್ತು 31ನೇ ಸಾಲುಗಳ ವಾರ್ಷಿಕ ವರದಿಗಳು;

38. 1991–92ನೇ ಸಾಲಿನ ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ನಿಗಮ ನಿಯಮಿತದ 28ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು;

39. 1991–92ನೇ ಸಾಲಿನ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 28ನೇ ವಾರ್ಷಿಕ ವರದಿ.

40. 1991–92ನೇ ಸಾಲಿನ ಕರ್ನಾಟಕ ರೇಷ್ಮೆ ಮಾರಾಟ ಮಂಡಲಿ ನಿಯಮಿತದ 13ನೇ ವಾರ್ಷಿಕ ವರದಿ.

1948ನೇ ಇಸವಿಯ ವಿದ್ಯುಚ್ಛಕ್ತಿ (ಸರಬರಾಜು) (ಕೇಂದ್ರ ಕಾಯಿದೆ) ಅಧಿನಿಯಮದ 61 (3)ನೇ ಕಲಮಿನ ಮೇರೆಗೆ

41. 1992–93ನೇ ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ಹಣಕಾಸಿನ ವಿವರ ಹಾಗೂ 1991–92ನೇ ಇಸವಿಯ ಪರಿಷ್ಕೃತ ಹಣಕಾಸಿನ ವಿವರಗಳ ವರದಿ.

1966ನೇ ಇಸವಿಯ ಕಂಪನಿ ಅಧಿನಿಯಮದ 619(ಎ) ಕಲಮಿನ ಮೇರೆಗೆ:

41. 1989-90ನೇ ಸಾಲಿನ ಕರ್ನಾಟಕ ವಿದ್ಯುತ್ ನಿಗಮದ 20ನೇ ವಾರ್ಷಿಕ ವರದಿ:

1948ನೇ ಇಸವಿಯ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 69(5) ಕಲಮಿನ ಮೇರೆಗೆ:

42. 1990-91ನೇ ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಲೆಕ್ಕಪತ್ರಗಳ ವರದಿಯ ಜೊತೆಗೆ ತುಲನಾ ಪತ್ರಗಳು (ವರದಿಗಳನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ).

1966ನೇ ಇಸವಿಯ ಮೈಸೂರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧಿನಿಯಮ 25 (3)ನೇ ಕಲಮಿನ ಮೇರೆಗೆ:

43. 1991–92ನೇ ಸಾಲಿನ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಾರ್ಷಿಕ ಆಡಳಿತ ವರದಿ.

1974ನೇ ಇಸವಿಯ ಜಲ (ಮಾಲಿನ್ಯ ಮತ್ತು ನಿಯಂತ್ರಣ) ಕಾಯ್ದೆಯ 40 (7) ನೇ ಕಲಮಿನ ಮೇರೆಗೆ:

44. 1989–90ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಲೆಕ್ಕ ಪರಿಶೋಧನಾ ವರದಿ (ವರದಿಯನ್ನು ಸಲ್ಲಿಸುವಲ್ಲಿ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ).

1952ನೇ ಇಸವಿಯ ವಿಚಾರಣಾ ಆಯೋಗದ ಅಧಿನಿಯಮದ 3(4) ನೇ ಕಲಮಿನ ಮೇರೆಗೆ:

45. ಶ್ರೀ ಎಸ್. ವೆಂಕಟರಾಮು ಆಯೋಗವು ದಿನಾಂಕ: 29–04–1990 ರಂದು ಬಳ್ಳಾರಿ ಜಿಲ್ಲೆ ಸಂಗನಕಲ್ ಗ್ರಾಮದಲ್ಲಿ ಹರಿಜನರ ಮೇಲೆ ನಡೆದ ದೌರ್ಜನ್ಯ ಕುರಿತ ವರದಿಯು ಹಾಗೂ ಮೆಮೊರಾಂಡಮ್‌ನೊಂದಿಗೆ (ವರದಿಯನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ)

46. ಗುಲ್ಬರ್ಗಾ ಜಿಲ್ಲೆ ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ಸಂಭವಿಸಿದ ಪೋಲೀಸ್ ಲಾಕಪ್ ಸಾವಿನ ಪರಿಣಾಮವಾದ ಗೋಲೀಬಾರ್ ಘಟನೆ ಬಗೆಗಿನ ಶ್ರೀ ಕೆ. ಭಕ್ತವತ್ಸಲಂ ವಿಚಾರಣಾ ಆಯೋಗದ ವರದಿ.

1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ:

47. 1984–85ನೇ ಸಾಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ವರದಿ.

48. 1989–90ನೇ ಸಾಲಿನ ಕಾವೇರಿ ಜಲಾನಯನ ಏತ ನೀರಾವರಿ ನಿಗಮದ 3ನೇ ವಾರ್ಷಿಕ ವರದಿ ಮೇಲಿನ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

II. ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಭಾರತ ಸಂವಿಧಾನದ ಅನುಚ್ಛೇದ 213(2)(ಎ) ನೇ ಕಲಮಿನ ಮೇರೆಗೆ:

1. 1992ನೇ ಇಸವಿಯ ಕರ್ನಾಟಕ ಅವಶ್ಯಕ ಸೇವೆಗಳ ನಿರ್ವಹಣೆ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 04–07–1992ರಂದು ಹೊರಡಿಸಲಾದ ಎಲ್‌ಎಡಬ್ಲ್ಯು : 50 : ಎಲ್‌ಜಿಎನ್: 92ನೇ ಅಧಿಸೂಚನೆ

1988ನೇ ಇಸವಿಯ ಮೋಟಾರು ವಾಹನ ಅಧಿನಿಯಮದ 102ನೇ ಕಲಮಿನ ಮೇರೆಗೆ:

2. ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆ ಮತ್ತು ಬೆಳಗಾವಿ ಹಾಗೂ ಬಿಜಾಪುರ ಜಿಲ್ಲೆಗಳ ಭಾಗದ ರಾಜ್ಯ ಸಾರಿಗೆ ಸಂಸ್ಥೆಯ ಯೋಜನೆಯ ಮಾರ್ಪಾಡಿಗೆ ಸಂಬಂಧಿಸಿದಂತೆ ದಿನಾಂಕ: 13–07–1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಟಿಡಿ:107:ಟಿಎಂಎ :91.

1989ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮದ 151ನೇ ಕಲಮಿನ 2ನೇ ಉಪ ಕಲಮಿನ ಮೇರೆಗೆ:

3. ಕೆ.ಎಸ್.ಟಿ.ಡಿ.ಸಿ. ನಿಯಮದ ನೂತನ ವಾಹನಗಳಿಗೆ ವಿನಾಯಿತಿ ನೀಡಿಕೆಗೆ ಸಂಬಂಧಿಸಿದಂತೆ

ದಿನಾಂಕ: 04–11–1991 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಟಿಡಿ:22:ಟಿಎಂಎ: 91. ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

1950 ನೇ ಇಸವಿಯ ರಸ್ತೆ ಸಾರಿಗೆ ನಿಗಮದ ಕಾಯಿದೆ 33(4)ನೇ ಕಲಮಿನ ಮೇರೆಗೆ:

4. 1989–90ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

III. ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಮಂತ್ರಿ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಭಾರತ ಸಂವಿಧಾನದ ಅನುಚ್ಛೇದ 213(2)ನೇ ಕಲಮಿನ ಮೇರೆಗೆ:

1992ನೇ ಇಸವಿಯ ರಾಜೀವ್ ಗಾಂಧಿ ಕೃಷಿ ಕಾರ್ಮಿಕರ ಕಲ್ಯಾಣ ನಿಧಿಯ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 16–10–1992ರಂದು ಹೊರಡಿಸಲಾದ ಎಲ್‌ಎಡಬ್ಲ್ಯೂ :70: ಎಲ್‌ಜಿಎನ್:92ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

IV. ಮಾನ್ಯ ಉಪಾಧ್ಯಕ್ಷಿಣಿಯವರೆ ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಭಾರತ ಸಂವಿಧಾನದ ಅನುಚ್ಛೇದ 213(2)(ಎ)ನೇ ಕಲಮಿನ ಮೇರೆಗೆ:

1. 1992ನೇ ಇಸವಿಯ ಕರ್ನಾಟಕ ಪುರಸಭೆ (2ನೇ ತಿದ್ದುಪಡಿ) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 28–09–1992ರಂದು ಹೊರಡಿಸಲಾದ ಎಲ್‌ಎಡಬ್ಲ್ಯು:62:ಎಲ್‌ಜಿಎನ್:92ನೇ ಕ್ರಮಾಂಕದ ಅಧಿಸೂಚನೆ.

2. 1992ನೇ ಇಸವಿಯ ಕರ್ನಾಟಕ ಪುರಸಭೆ (3ನೇ ತಿದ್ದುಪಡಿ) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 26–10–1992 ರಂದು ಹೊರಡಿಸಲಾದ ಎಲ್‌ಎಡಬ್ಲ್ಯು:68:ಎಲ್‌ಜಿಎನ್:92ನೇ ಕ್ರಮಾಂಕದ ಅಧಿಸೂಚನೆ.

3. 1992ನೇ ಇಸವಿಯ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ಅಧ್ಯಾದೇಶಕ್ಕೆ ಸಂಬಂಧಿಸಿದ ದಿನಾಂಕ: 07–08–1992ರಂದು ಹೊರಡಿಸಲಾದ ಎಲ್‌ಎಡಬ್ಲ್ಯು:27: ಎಲ್‌ಜಿಎನ್: 92ನೇ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

1987ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರೆಗೆ:

4. 1989–90 ಮತ್ತು 1990–91ನೇ ಸಾಲುಗಳ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ.

5. 1990–91ನೇ ಸಾಲುಗಳ ಬಿಜಾಪುರ, ಹಾಸನ ಮತ್ತು ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

1962ನೇ ಇಸವಿಯ ಕರ್ನಾಟಕ ಗೃಹ ಮಂಡಳಿಯ ಅಧಿನಿಯಮ 69ನೇ ಕಲಮಿನ ಮೇರೆಗೆ:

6. 1987–88ಮತ್ತು 1988–89ನೇ ಸಾಲುಗಳ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿಯ ಲೆಕ್ಕ ಪರಿಶೋಧನಾ ವರದಿ. (ವರದಿಗಳನ್ನು ಸಲ್ಲಿಸುವಲ್ಲಿ ವಿಳಂಬದ ಬಗ್ಗೆ ಟಿಪ್ಪಣಿಯೊಂದಿಗೆ.)

1975ನೇ ಇಸವಿಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ಮಂಡಲಿಯ ಅಧಿನಿಯಮ 7(ಅ) ಕಲಮಿನ ಮೇರೆಗೆ:

7. 1989–90ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ಮಂಡಲಿಯ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ.

1964ನೇ ಇಸವಿಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಅಧಿನಿಯಮ 86(2) ಕಲಮಿನ ಮೇರೆಗೆ:

8. 1990–91 ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಸಾಧನೆಯ ವರದಿಯನ್ನು ಸಭೆಯ ಮುಂದಿಡುತ್ತೇನೆ.

V. ಶ್ರೀ ಧರ್ಮಸಿಂಗ್ (ಸಮಾಜಕಲ್ಯಾಣ ಮಂತ್ರಿ):- ಮಾನ್ಯ ಉಪಾಧ್ಯಕ್ಷೆಯವರೆ,
1986ನೇ ಇಸವಿಯ ಬಾಲ ನ್ಯಾಯ ಕಾಯಿದೆಯ (ಕೇಂದ್ರ ಕಾಯಿದೆ) 62(3)ನೇ ಕಲಮಿನ ಮೇರೆಗೆ:

1. 1992ನೇ ಇಸವಿಯ ಬಾಲನ್ಯಾಯ (ಕರ್ನಾಟಕ) ತಿದ್ದುಪಡಿ ನಿಯಮಾವಳಿಗಳಿಗೆ ಸಂಬಂಧಿಸಿದಂತೆ ದಿನಾಂಕ: 04–09–1992ರಂದು ಹೊರಡಿಸಲಾದ ಎಸ್‌ಡಬ್ಲ್ಯುಎಲ್ :76: ಎಸ್‌ಬಿಬಿ: 89ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ:

2. 1990–91ನೇ ಸಾಲಿನ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ನಿಯಮಿತದ 14ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು.

3. 1989–90 ಹಾಗೂ 1990–91ನೇ ಸಾಲುಗಳ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ನಿಯಮಿತದ 4ನೇ ಮತ್ತು 5ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು.

4. 1989–90ನೇ ಸಾಲಿನ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ನಿಯಮಿತದ ವಾರ್ಷಿಕ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

VI. ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ):- ಮಾನ್ಯ ಉಪಾಧ್ಯಕ್ಷೆಯವರೆ,
1983ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್‌ಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ 182(2)ನೇ ಕಲಮಿನ ಮೇರೆಗೆ:

1. ಕರ್ನಾಟಕ ಜಿಲ್ಲಾ ಪರಿಷತ್‌ಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ 1983 (ತಿದ್ದುಪಡಿ) ಗೆ ಸಂಬಂಧಿಸಿದಂತೆ ದಿನಾಂಕ: 21–07–1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ: 561 : ಜಡ್‌ಪಿಎಸ್ : 91ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇವೆ.

1983ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್, ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್‌ಗಳ ಅಧಿನಿಯಮ 309(3) ನೇ ಕಲಮಿನ ಮೇರೆಗೆ:

2. 1990–91ನೇ ಸಾಲಿನ ಉತ್ತರ ಕನ್ನಡ, ಕಾರವಾರ, ಹಾಸನ, ಕೊಡಗು, ಧಾರವಾಡ, ಬೀದರ್, ಬೆಂಗಳೂರು (ಗ್ರಾಮೀಣ) ಮತ್ತು ತುಮಕೂರು ಜಿಲ್ಲಾ ಪರಿಷತ್ತಿನ ವಾರ್ಷಿಕ ಆಡಳಿತ ವರದಿಗಳು.

(ಹಾಗೂ ಕಾರ್ಯಸಾಧನೆಗಳನ್ನು ಕರ್ನಾಟಕ ಸರ್ಕಾರವು ಪರಿಶೀಲಿಸಿದ ಬಗೆಗಿನ ಜ್ಞಾಪನಾ ಪತ್ರದೊಂದಿಗೆ).

1971ನೇ ಇಸವಿಯ ನಿಯಂತ್ರಕ ಮಹಾ ಲೇಖಾ ಪರೀಕ್ಷಕರ (ಕರ್ತವ್ಯಗಳು, ಅಧಿಕಾರ ಮತ್ತು ಸೇವಾ ಷರತ್ತುಗಳು) ಅಧಿನಿಯಮ 19(ಎ) ಕಲಮಿನ ಮೇರೆಗೆ:

3. 1987–88ನೇ ಸಾಲಿನ ಬೆಂಗಳೂರು ಗ್ರಾಮೀಣ, ತುಮಕೂರು, ಶಿವಮೊಗ್ಗ, ಕೋಲಾರ, ಮಂಡ್ಯ, ಚಿತ್ರದುರ್ಗ, ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಬಿಜಾಪುರ, ಬೆಳಗಾಂ, ಧಾರವಾಡ, ಉತ್ತರ ಕನ್ನಡ (ಕಾರವಾರ), ಬೀದರ್, ಬಳ್ಳಾರಿ ಮತ್ತು ರಾಯಚೂರು ಜಿಲ್ಲಾ ಪರಿಷತ್‌ಗಳ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

VII. ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ):- ಮಾನ್ಯ ಉಪಾಧ್ಯಕ್ಷಿಣಿಯವರೆ,

ಭಾರತ ಸಂವಿಧಾನದ ಅನುಚ್ಛೇದ 213(2)(ಎ)ನೇ ಕಲಮಿನ ಮೇರೆಗೆ:

1992ನೇ ಇಸವಿಯ ಭಾರತ ರಾಷ್ಟ್ರೀಯ ಕಾನೂನು ಶಾಲೆ (ತಿದ್ದುಪಡಿ) (ಸಂ. 2) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 19–08–1992ರಂದು ಹೊರಡಿಸಲಾದ ಎಲ್‌ಎಡಬ್ಲ್ಯು:58: ಎಲ್‌ಜಿಎನ್: 92 ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

VIII. ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಮಂತ್ರಿ):- ಮಾನ್ಯ ಉಪಾಧ್ಯಕ್ಷಿಣಿಯವರೆ,

1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ:

1987–88ನೇ ಸಾಲಿನ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ, ನಿಯಮಿತದ 21ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

IX. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಮಂತ್ರಿ):- ಮಾನ್ಯ ಉಪಾಧ್ಯಕ್ಷಿಣಿಯವರೆ,

1959ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ 130ನೇ ಕಲಮಿನ ಮೇರೆಗೆ:

1. 1960ನೇ ಇಸವಿಯ ಕರ್ನಾಟಕ ಸಹಕಾರ ಸಂಘ ನಿಯಮಾವಳಿಯ 2ನೇ ವರ್ಗದ 21–ಎ(1) ರ ನಿಯಮದ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ: 16–07–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:165: ಸಿಎಲ್‌ಎಂ: 92ನೇ ಕ್ರಮಾಂಕದ ಅಧಿಸೂಚನೆ.

2. ಬೆಂಗಳೂರಿನ ಕರ್ನಾಟಕ ರಾಜ್ಯ ಸಹಕಾರಿ ಮಹಾ ಮಂಡಳಿ ನಿಯಮಿತದ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ಚುನಾವಣೆ ನಡೆಸುವ ಸಂಬಂಧದಲ್ಲಿ ದಿನಾಂಕ: 26–06–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:557:ಸಿಎಲ್‌ಎಂ: 91ನೇ ಕ್ರಮಾಂಕದ ಅಧಿಸೂಚನೆ.

3. 1960ನೇ ಇಸವಿಯ ಕರ್ನಾಟಕ ಸಹಕಾರ ಸಂಘದ 21 (ಎ) ನಿಯಮದ ಅಡಿಯಲ್ಲಿ ನರಗುಂದದ ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿಯನ್ನು ಮೊದಲನೇ ದರ್ಜೆಯದೆಂದು ವರ್ಗೀಕರಣ ಮಾಡುವುದರ ಸಂಬಂಧದಲ್ಲಿ ದಿನಾಂಕ: 01–08–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:91:ಸಿಎಲ್‌ಎಂ: 89ನೇ ಕ್ರಮಾಂಕದ ಅಧಿಸೂಚನೆ.

4. ಕನಕಪುರದ ಪಿಸಿಎಆರ್‌ಡಿ ಬ್ಯಾಂಕ್ ನಿಯಮಿತದ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ಚುನಾವಣೆ ನಡೆಸುವುದರ ಸಂಬಂಧದಲ್ಲಿ ದಿನಾಂಕ: 15–06–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:143: ಸಿಎಲ್‌ಎಂ: 92ರ ಕ್ರಮಾಂಕದ ಅಧಿಸೂಚನೆ.

5. ಬೀದರ್‌ನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತದ ಅಧ್ಯಕ್ಷರ ಚುನಾವಣೆಯನ್ನು ಮುಂದೂಡುವುದರ ಸಂಬಂಧದಲ್ಲಿ ದಿನಾಂಕ: 14–07–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:256:ಸಿಎಲ್‌ಎಂ: 92ನೇ ಕ್ರಮಾಂಕದ ಆದೇಶ.

6. ಬೆಂಗಳೂರಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರ ಗೃಹ ನಿರ್ಮಾಣ ಸಹಕಾರಿ ಸಂಘದ ಸರ್ವ ಸದಸ್ಯರ ಸಭೆ ಹಾಗೂ ಚುನಾವಣೆಯನ್ನು ನಡೆಸುವುದರ ಸಂಬಂಧದಲ್ಲಿ ದಿನಾಂಕ: 25–06–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:121:ಸಿಎಲ್‌ಎಂ: 92ನೇ ಕ್ರಮಾಂಕದ ಆದೇಶ.

7. 1960ನೇ ಇಸವಿಯ ಕರ್ನಾಟಕ ಸಹಕಾರಿ ಸಂಘದ ನಿಯಮಾವಳಿಗಳ 21(ಎ) ನೇ ನಿಯಮದ ಅಡಿಯಲ್ಲಿ ಸಿರ್ಸಿ (ಉತ್ತರ ಕನ್ನಡ) ಯಲ್ಲಿನ ತೋಟಗಾರರ ಸಹಕಾರಿ ಮಾರಾಟ ಸಂಘ ನಿಯಮಿತವನ್ನು 2ನೇ ದರ್ಜೆಯಾಗಿ ಪುನರ್‌ವರ್ಗೀಕರಣ ಮಾಡುವುದರ ಸಂಬಂಧದಲ್ಲಿ ದಿನಾಂಕ: 17–07–1992 ರಂದು ಹೊರಡಿಸಲಾದ ಸಿಎಂಡಬ್ಲ್ಯು:45:ಸಿಎಲ್‌ಎಂ: 92ನೇ ಕ್ರಮಾಂಕದ ಅಧಿಸೂಚನೆ.

8. ಹುಬ್ಬಳ್ಳಿಯ ಮಾರಾಟ ಸಹಕಾರ ಬ್ಯಾಂಕ್ ನಿಯಮಿತದ ಸರ್ವ ಸದಸ್ಯರ ಸಭೆ ಹಾಗೂ ಚುನಾವಣೆ ಏನಾದರೂ ಇದ್ದಲ್ಲಿ ಅದನ್ನು 1992ರ ಆಗಸ್ಟ್ ತಿಂಗಳೊಳಗಾಗಿ ನಡೆಸತಕ್ಕದ್ದು ಎಂಬುದಕ್ಕೆ ಸಂಬಂಧಿಸಿದಂತೆ ದಿನಾಂಕ: 18–06–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:229:ಸಿಎಲ್‌ಎಂ: 92ರ ಕ್ರಮಾಂಕದ ಅಧಿಸೂಚನೆ.

9. ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪದಾಧಿಕಾರಿಗಳ ಅವಧಿಯನ್ನು ವಿನಾಯಿತಿಗೊಳಿಸುವುದರ ಸಂಬಂಧದಲ್ಲಿ ದಿನಾಂಕ: 09–09–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:321:ಸಿಎಲ್‌ಎಂ: 92ನೇ ಕ್ರಮಾಂಕದ ಆದೇಶ.

10. ಗುಲ್ಬರ್ಗಾದ ಸಹಕಾರಿ ಹಾಲು ಉತ್ಪಾದಕರ ಸಂಘ ನಿಯಮಿತದ ಅಧ್ಯಕ್ಷರ ಚುನಾವಣೆಯನ್ನು ಮುಂದೂಡುವುದರ ಸಂಬಂಧದಲ್ಲಿ ದಿನಾಂಕ: 16–09–1992ರಂದು ಹೊರಡಿಸಲಾದ ಸಿಎಂಡಬ್ಲ್ಯು:328:ಸಿಎಲ್‌ಎಂ: 92ನೇ ಕ್ರಮಾಂಕದ ಆದೇಶಗಳನ್ನು ಸಭೆಯ ಮುಂದಿಡುತ್ತೇನೆ.

1962ನೇ ಇಸವಿಯ ಉಗ್ರಾಣ ನಿಗಮದ ಅಧಿನಿಯಮ 31(11)ನೇ ಕಲಮಿನ ಮೇರೆಗೆ:

11. 1988–89ನೇ ಸಾಲಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತದ 31ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

X. ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ):- ಮಾನ್ಯ ಉಪಾಧ್ಯಕ್ಷಿಣಿಯವರೆ,

1985ನೇ ಇಸವಿಯ ತೂಕ ಮತ್ತು ಅಳತೆಯ ಪ್ರಮಾಣ (ನಿರ್ಬಂಧ) ಅಧಿನಿಯಮದ 72(5)ನೇ ಕಲಮಿನ ಮೇರೆಗೆ:

1992ನೇ ಇಸವಿಯ ಕರ್ನಾಟಕ ತೂಕ ಮತ್ತು ಅಳತೆ (ನಿರ್ಬಂಧ) ಪ್ರಮಾಣ (ತಿದ್ದುಪಡಿ) ನಿಯಮಾವಳಿಗಳಿಗೆ ಸಂಬಂಧಿಸಿದಂತೆ ದಿನಾಂಕ: 04–08–1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಟಿಡಿ: 342:ಇಬಿಟಿ: 91ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

XI. ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿ):- ಮಾನ್ಯ ಉಪಾಧ್ಯಕ್ಷಿಣಿಯವರೆ,

ಭಾರತ ಸಂವಿಧಾನದ ಅನುಚ್ಛೇದ 213(2)(ಎ) ನೇ ಕಲಮಿನ ಮೇರೆಗೆ:

1. 1992ನೇ ಇಸವಿಯ ಕರ್ನಾಟಕ ಸಾರ್ವಜನಿಕ ಸ್ಥಳಗಳ (ಅನಧಿಕೃತ ನಿವಾಸಿಗಳ ತೆರವು)

(ತಿದ್ದುಪಡಿ) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 08–10–1992 ರಂದು ಹೊರಡಿಸಲಾದ ಎಲ್‌ಎಡಬ್ಲ್ಯೂ:65: ಎಲ್‌ಜಿಎನ್: 92ನೇ ಕ್ರಮಾಂಕದ ಅಧಿಸೂಚನೆ.

1957ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಅಧಿನಿಯಮದ 9(2) ನೇ ಕಲಮಿನ ಮೇರೆಗೆ:

2. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಸ್ಟ್ಯಾಂಪ್ ಶುಲ್ಕ ಮತ್ತು ನೋಂದಣಿ ಶುಲ್ಕದ ಪಾವತಿಯಿಂದ ವಿನಾಯಿತಿಗೆ ಸಂಬಂಧಿಸಿದಂತೆ ದಿನಾಂಕ: 28–08–1992 ರಂದು ಹೊರಡಿಸಲಾದ ಆರ್‌ಡಿ:101:ಇಎಸ್‌ಆರ್: 92ನೇ ಕ್ರಮಾಂಕದ ಆದೇಶ.

3. ಆನಂದ್ ಸಾಮಾಜಿಕ ಹಾಗೂ ಶೈಕ್ಷಣಿಕ ಸಂಘ (ನೋಂ) ಬಂಡಪ್ಪ ಕಾಲೋನಿ, ಯಶವಂತಪುರ, ಬೆಂಗಳೂರು – 22 ಇವರಿಗೆ ಸೇರಿದ ಭೂದಾನ ಪತ್ರ ಶುಲ್ಕದ ಪಾವತಿಗೆ ಸಂಬಂಧಿಸಿದಂತೆ ದಿನಾಂಕ: 03–09–1992ರಂದು ಹೊರಡಿಸಲಾದ ಆರ್‌ಡಿ:339: ಇಎಸ್‌ಆರ್: 90ನೇ ಕ್ರಮಾಂಕದ ಆದೇಶ.

4. ಮಾರುಕಟ್ಟೆ ಮಹಾಮಂಡಲಿಯಿಂದ ದಾವಣಗೆರೆ ಸೇಂಗಾ ಎಣ್ಣೆ ಸಂಕೀರ್ಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಎಣ್ಣೆ ಮಂಡಲಿಗೆ ಸ್ಟ್ಯಾಂಪ್ ಶುಲ್ಕದಿಂದ ವಿನಾಯಿತಿ ಮಂಜೂರಾತಿ ಬಗ್ಗೆ ದಿನಾಂಕ: 21–09–1992ರಂದು ಹೊರಡಿಸಲಾದ ಆರ್‌ಡಿ:89: ಇಎಸ್‌ಆರ್: 92ನೇ ಕ್ರಮಾಂಕದ ಆದೇಶ.

5. ನೀರಾವರಿ ಉದ್ದೇಶಕ್ಕಾಗಿ (ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬೇನವಾಡ್‌ನಲ್ಲಿರುವ ಏತ ನೀರಾವರಿ ಯೋಜನೆ) ಸ್ಟ್ಯಾಂಪ್ ಶುಲ್ಕ ಹಾಗೂ ನೋಂದಣಿ ಶುಲ್ಕವನ್ನು ವಿನಾಯಿತಿ ಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 01–10–1992ರಂದು ಹೊರಡಿಸಲಾದ ಆರ್‌ಡಿ:33: ಇಎಸ್‌ಆರ್ : 92ನೇ ಕ್ರಮಾಂಕದ ಆದೇಶ.

6. ಕೇಂದ್ರ ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣ ಮುಂಗಡ ಹಣದ ಮಂಜೂರಾತಿಯ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರಿ ನೌಕರರು ಬರೆದುಕೊಟ್ಟ ಅಡಮಾನ ಪತ್ರದ ಮೇಲಿನ ಸ್ಟ್ಯಾಂಪ್ ಶುಲ್ಕಕ್ಕೆ ಸಂಬಂಧಿಸಿದಂತೆ ದಿನಾಂಕ: 30–09–1992ರಂದು ಹೊರಡಿಸಲಾದ ಆರ್‌ಡಿ:319:ಇಎಸ್‌ಆರ್: 92ನೇ ಕ್ರಮಾಂಕದ ಆದೇಶ.

7. ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ (ರಿ) ದರ್ಗಾ ರಸ್ತೆ, ಗುಲ್ಬರ್ಗಾ ಅವರಿಗೆ ಸ್ಟ್ಯಾಂಪ್ ಶುಲ್ಕದಿಂದ ವಿನಾಯಿತಿಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 30–10–1992ರಂದು ಹೊರಡಿಸಲಾದ ಆರ್‌ಡಿ:223:ಇಎಸ್‌ಆರ್: 92ನೇ ಕ್ರಮಾಂಕದ ಆದೇಶ.

ಕರ್ನಾಟಕ ಭೂ ಕಂದಾಯ ನಿಯಮ 1964ರ ಪ್ರಕರಣ 194ರ (i ಮತ್ತು ii ಕಲಮಿನ ಮೇರೆಗೆ):

8. ಧಾರವಾಡ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ 1990–91ನೇ ಸಾಲಿನ 33 ಹಿಂಗಾರಿ ಗ್ರಾಮಗಳ ಭೂ ಕಂದಾಯ ರೂ. 62,044–09ನ್ನು ಮನ್ನಾ ಮಾಡುವ ಬಗ್ಗೆ ದಿನಾಂಕ: 12–12–1991ರಂದು ಹೊರಡಿಸಲಾದ ಆರ್‌ಡಿ:180:ಟಿಆರ್‌ಎಂ: 91ನೇ ಕ್ರಮಾಂಕದ ಅಧಿಸೂಚನೆ.

9. ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ 1990–91ನೇ ಸಾಲಿನ 35 ಹಿಂಗಾರಿ ಗ್ರಾಮಗಳ ಭೂ ಕಂದಾಯ ರೂ. 72,156–88ನ್ನು ಮನ್ನಾ ಮಾಡುವ ಬಗ್ಗೆ ದಿನಾಂಕ : 17–11–1991ರಂದು ಹೊರಡಿಸಲಾದ ಆರ್‌ಡಿ:187:ಟಿಆರ್‌ಎಂ: 91ನೇ ಕ್ರಮಾಂಕದ ಅಧಿಸೂಚನೆ.

10. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ 1990–91ನೇ ಸಾಲಿನ 34ಮುಂಗಾರಿ ಗ್ರಾಮಗಳ ಭೂ ಕಂದಾಯ ರೂ. 70,914–61ನ್ನು ಮನ್ನಾ ಮಾಡುವ ಬಗ್ಗೆ ದಿನಾಂಕ : 30–11–1991 ರಂದು ಹೊರಡಿಸಲಾದ ಆರ್‌ಡಿ:204:ಟಿಆರ್‌ಎಂ: 91ನೇ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

XII. ಶ್ರೀ ಎಸ್. ಎಂ. ಯಾಹ್ಯಾ (ಶಿಕ್ಷಣ ಮತ್ತು ವಕ್ಫ್ ಮಂತ್ರಿ):- ಮಾನ್ಯ ಉಪಾಧ್ಯಕ್ಷಣಿಯವರೆ, ಭಾರತ ಸಂವಿಧಾನದ ಅನುಚ್ಛೇದ 213(2)(ಎ)ನೇ ಕಲಮಿನ ಮೇರೆಗೆ:

1. 1992ನೇ ಇಸವಿಯ ಕರ್ನಾಟಕ ಮಾನ್ಯತೆ ಪಡೆಯದ ಹಾಗೂ ಸಂಯೋಜಿತವಲ್ಲದ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳ ಪ್ರವೇಶ ನಿಷೇಧ (ಸಂ. 2) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 20 ಹಾಗೂ 21-08-1992 ರಂದು ಹೊರಡಿಸಲಾದ ಎಲ್ಎಡಬ್ಲ್ಯೂ:41: ಎಲ್ಜಿಎನ್ : 92ನೇ ಕ್ರಮಾಂಕದ ಅಧಿಸೂಚನೆ.

2. 1992ನೇ ಇಸವಿಯ ಕರ್ನಾಟಕ ವಕ್ಫ್ ಮಂಡಲಿ (ವಿಶೇಷ ಅಧಿಕಾರಿಯ ನೇಮಕಾತಿ) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 08-10-1992 ರಂದು ಹೊರಡಿಸಲಾದ ಎಲ್ಎಡಬ್ಲ್ಯೂ:55:ಎಲ್ಜಿಎನ್: 92ನೇ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

1975ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 45(2) ನೇ ಕಲಮಿನ ಮೇರೆಗೆ:

3. 1990-91ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ.

4. 1989-90ನೇ ಸಾಲಿನ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ.

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 42 (3)ನೇ ಕಲಮಿನ ಮೇರೆಗೆ:

5. 1988-89ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳು.

6. 1987-88 ಮತ್ತು 1988-89ನೇ ಸಾಲುಗಳ ಮೈಸೂರು ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳು.

7. 1987 - 88ನೇ ಸಾಲಿನ ಧಾರವಾಡ. ಕರ್ನಾಟಕ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳು.

8. 1986-87 ಮತ್ತು 1987-88ನೇ ಸಾಲುಗಳ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳು.

9. 1989-90ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷಣಿಯವರು:- ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.